





ಮತ್ಸ್ಯಾಲಯದಲ್ಲೊಂದು ದೈತ್ಯ ಮೀನು



ಮರೂಂಡ ಪಾರ್ಕ್‌ನಲ್ಲಿ

ಶಿಕ್ಷಣಕ್ಕೂ ಇಲ್ಲಿ ಬಹಳ ಮಹತ್ವವಿದೆ. ಊರ ತುಂಬ ಅಲ್ಲಲ್ಲಿ ಯೋಗ ಕೇಂದ್ರಗಳಿವೆ. ನನ್ನ ಮಗಳು ವಾಸಿಸುವ ಕಾರ್ನಿಗಿ ಬಡಾವಣೆಯ ಕೆಲ ರಸ್ತೆಗಳಿಗೆ ಕರ್ಮ ಅವೆನ್ಯೂ, ನಿರ್ವಾಣ ಅವೆನ್ಯೂ ಮುಂತಾಗಿ ಹೆಸರಿಟ್ಟಿದ್ದಾರೆ.

ಮೆಲ್ಬರ್ನಿನಲ್ಲಿ ಭಿಕ್ಷುಕರು ಕಾಣಿಸುವುದಿಲ್ಲ. ಆರ್ಥಿಕವಾಗಿ ಹಿಂದುಳಿದವರಿಗೆ ಸರ್ಕಾರವೇ ಸಹಾಯ ಮಾಡುತ್ತದಂತೆ. ಫ್ಲಿಂಡರ್ಸ್ ಸ್ಟ್ರೀಟ್ ರೈಲ್ವೆ ಸ್ಟೇಶನ್ನಿನಲ್ಲಿ ಒಂದು ಹೃದಯಸ್ಪರ್ಶಿ ದೃಶ್ಯ ಕಣ್ಣಿಗೆ ಬಿತ್ತು. ಅಂಗವಿಕಲನೂ ದುರ್ಬಲನೂ ಆದ ಒಬ್ಬ ವೃದ್ಧ ತನ್ನ ಮುಂದೆ ದಿನಪತ್ರಿಕೆಗಳನ್ನು ಹರಡಿಕೊಂಡು ಏನೋ ವಿಕಾರವಾಗಿ ಕೂಗಿಕೊಳ್ಳುತ್ತಿದ್ದ. ತನ್ನ ಕೂಗು ಯಾರಿಗೂ ಅರ್ಥವಾಗದೆಂದು ಮುಂದಿನ ಹಲಗೆಯಲ್ಲಿ ಆತನಿಂದ ಜನ ದಯಮಾಡಿ ಪತ್ರಿಕೆ ಕೊಂಡುಕೊಳ್ಳಬೇಕೆಂದು ಬರೆದುಕೊಂಡಿದ್ದ. ಜನ ಪತ್ರಿಕೆ ಎತ್ತಿಕೊಂಡು ನಾಣ್ಯ ಇಟ್ಟು ಹೋಗುತ್ತಿದ್ದರು.

ಇಲ್ಲಿನ ಜನರಲ್ಲಿ ಸಂತೃಪ್ತ, ಸಮಾಧಾನ ಮತ್ತು ಸಹನಾ ಭಾವವಿದೆ. ವೃದ್ಧರಂತೂ ತರುಣರನ್ನು ನಾಚಿಸುವಷ್ಟು ಕ್ರಿಯಾಶೀಲರು. ಯಾಕೆ ಬದುಕಬೇಕು? ಅಂದು ಕೊಳ್ಳುವುದಿಲ್ಲ. ಹೇಗೆ ಬದುಕಬೇಕು ಎಂಬುದಷ್ಟೇ ಇವರ ನಿಲುವು.

ಕುಡಿತ ಮಾತ್ರ ಇಲ್ಲಿ ನಿಯಂತ್ರಣವಿಲ್ಲ. ಹೆಣ್ಣುಮಕ್ಕಳು ಕೂಡ ಸಂಜೆಯಾಗುತ್ತಿದ್ದಂತೆ ಕುಡಿದು ತೂರಾಡುತ್ತಾರೆ. ಪೋಲಿಸರು ಉಪಾಯವಾಗಿ ಕರೆದೊಯ್ದು ಠಾಣೆಯಲ್ಲಿ ಕೂರಿಸಿ ಪ್ರಜ್ಞೆ ಬಂದ ಮೇಲೆ ಮನೆಗೆ ಕಳಿಸುತ್ತಾರೆ.